

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಧರ್ಮಕ್ಷೇತ್ರವು ಕುರುಕ್ಷೇತ್ರ ಆಗಬಾರದು

ಮಹಾಭಾರತದಲ್ಲಿ ದುರ್ಯೋಧನನ ಹಠಮಾರಿತನದಿಂದಾಗಿ ಕೌರವರು ಮತ್ತು ಪಾಂಡವರ ಮಧ್ಯೆ ಕುರುಕ್ಷೇತ್ರದಲ್ಲಿ ಭೀಕರ ಕಾಳಗ. ಭೀಷ್ಮರು ಅರ್ಜುನನಿಂದ ಹತರಾಗಿ ಧರೆಗೆ ಉರುಳಿ ಶರಶಯ್ಯೆಯಲ್ಲಿ ಮಲಗಿದ ಮೇಲೆ ದ್ರೋಣಾಚಾರ್ಯರು ಸೇನಾಪತಿಗಳಾದ ಸಂದರ್ಭ. ಬಾಲ್ಯದಲ್ಲಿ ತಮಗೆ ಧನುರ್ವಿದ್ಯೆಯನ್ನು ಬೋಧಿಸಿದ ವಿದ್ಯಾಗುರುವಿನ ವಿರುದ್ಧವೇ ಸೆಣಸಾಡಬೇಕಾದ ಅನಿವಾರ್ಯ ಪರಿಸ್ಥಿತಿ. ಅಜೇಯರಾದ ದ್ರೋಣಾಚಾರ್ಯರನ್ನು ಸೋಲಿಸುವುದಾದರೂ ಹೇಗೆ? ಕೃಷ್ಣ ಅದಕ್ಕೊಂದು ಉಪಾಯ ಮಾಡುತ್ತಾನೆ. ಅಶ್ವತ್ಥಾಮ ಯುದ್ಧದಲ್ಲಿ ಮಡಿದ ಎಂಬ ಸುಳುಸುದ್ದಿಯನ್ನು ಹಬ್ಬಿಸಿದರೆ ತಂದೆಯಾದ ದ್ರೋಣಾಚಾರ್ಯರ ಹೃದಯದಲ್ಲಿ ಪುತ್ರವಾತ್ಸಲ್ಯದ ಶೋಕ ಮಡುಗಟ್ಟಿ ದುರ್ಬಲರಾಗುತ್ತಾರೆ! ಅಂತಹ ಸುಳುಸುದ್ದಿಯನ್ನು ಹಬ್ಬಿಸಿ ದ್ರೋಣರು ನಂಬುವಂತೆ ಮಾಡುವುದಾದರೂ ಹೇಗೆ? ಧರ್ಮರಾಯನ ಬಾಯಿಂದ ಹೇಳಿಸಿದರೆ ಅದು ಕಾರ್ಯಸಾಧ್ಯ. ಎಂದೂ ಸುಳ್ಳನ್ನು ಹೇಳದ ಧರ್ಮರಾಯ ಒಪ್ಪುವುದಿಲ್ಲ. "ಧರ್ಮಜ ನೀನು ಸುಳ್ಳು ಹೇಳಬೇಕಾಗಿಲ್ಲ. ಅಲ್ಲೊಂದು ಆನೆ ಸತ್ತಿದೆ, ಅದರ ಹೆಸರೂ ಅಶ್ವತ್ಥಾಮ. "ಅಶ್ವತ್ಥಾಮೋ ಹತಃ ಕುಂಜರಃ" (ಅಶ್ವತ್ಥಾಮನೆಂಬ ಆನೆ ಸತ್ತಿದೆ) ಎಂದು ನೀನು ಹೇಳಿದರೆ ಸುಳ್ಳು ಹೇಳಿದಂತೆ ಆಗುವುದಿಲ್ಲ!" ಎಂದು ಕೃಷ್ಣ ಹೇಳುತ್ತಾನೆ. ಧರ್ಮರಾಯನು ಅದಕ್ಕೆ ಸಮ್ಮತಿಸಿ ಯುದ್ಧಭೂಮಿಯಲ್ಲಿ 'ಅಶ್ವತ್ಥಾಮೋ ಹತಃ ಕುಂಜರಃ' ಎಂದು ಗಟ್ಟಿಯಾಗಿ ಕೂಗಿ ಹೇಳುತ್ತಾನೆ. ಯುದ್ಧತಂತ್ರವನ್ನು ಹೆಣೆದ ಕೃಷ್ಣನು 'ಕುಂಜರಃ' (ಆನೆ) ಎಂದು ಧರ್ಮರಾಯ ಹೇಳುವಾಗ ಅದು ಕೇಳಿಸದಂತೆ ತನ್ನ ಪಾಂಚಜನ್ಯವನ್ನು ಊದುತ್ತಾನೆ. ಅದರಿಂದಾಗಿ 'ಅಶ್ವತ್ಥಾಮೋ ಹತಃ' ಎಂಬುದನ್ನು ಮಾತ್ರ ಕೇಳಿಸಿಕೊಂಡ ದ್ರೋಣಾಚಾರ್ಯರು ಮಗನ ಮೇಲಿನ ಮೋಹದಿಂದ ಶಸ್ತ್ರತ್ಯಾಗ ಮಾಡಿ ಹತರಾಗುತ್ತಾರೆ. ಅರ್ಧಂಬರ್ಧ ಕೇಳಿಸಿಕೊಂಡ ಮಾತು ಎಷ್ಟರಮಟ್ಟಿಗೆ ಅನಾಹುತಕಾರಿ ಎಂಬುದಕ್ಕೆ ಇದಕ್ಕಿಂತ ಉತ್ತಮವಾದ ಉದಾಹರಣೆ ಬೇರೆ ಇರಲಾರದು.

ಮಹಾಭಾರತದ ಮೇಲಿನ ಘಟನೆಯನ್ನು ಇಲ್ಲಿ ಉಲ್ಲೇಖಿಸಲು ಕಾರಣ ಇದೇ ಸೆಪ್ಟೆಂಬರ್ 24 ರಂದು ನಮ್ಮ ಲಿಂಗೈಕ್ಯ ಗುರುವರ್ಯರ 20 ನೆಯ ಶ್ರದ್ಧಾಂಜಲಿ ಸಮಾರಂಭದ ಕೊನೆಯಲ್ಲಿ ಆಡಿದ ನಮ್ಮ ಮಾತುಗಳು ಸಾರ್ವಜನಿಕ ವಲಯದಲ್ಲಿ ಅನೇಕ ಊಹಾಪೋಹಗಳಿಗೆ, ತಪ್ಪುಕಲ್ಪನೆಗಳಿಗೆ ಎಡೆಮಾಡಿಕೊಟ್ಟಿದೆ. ಈ ವಿಚಾರವಾಗಿ ಮಾಧ್ಯಮಗಳಲ್ಲಿ ಸರಿಯಾಗಿಯೇ ವರದಿಯಾಗಿದ್ದರೂ ಮಠದ ಶಿಷ್ಯರು ಮತ್ತು ಅಭಿಮಾನಿಗಳು ಭಾವೋದ್ವೇಗಕ್ಕೆ ಒಳಗಾಗಿ ಆಘಾತ ವ್ಯಕ್ತಪಡಿಸಿದ್ದಾರೆ. ಭಾವೋದ್ವೇಗಕ್ಕೆ ಒಳಗಾದ ಮನಸ್ಸು ವಸ್ತುಸ್ಥಿತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದಿಲ್ಲ. ನಮ್ಮ ಅಂದಿನ ಮಾತುಗಳಿಗೆ ಪ್ರೇರೇಪಣೆ ನಮ್ಮ ಪರಮಾರಾಧ್ಯ ಗುರುವರ್ಯರಾದ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು ನಮಗೆ ಪಟ್ಟಕಟ್ಟುವ ಮುನ್ನ ಸಲ್ಲಿಸಿದ ತ್ಯಾಗಪತ್ರ. ಅವರು ಈ ಮಠದ ಅಧಿಪತಿಗಳಾಗಿದ್ದಾಗ ದಾವಣಗೆರೆಯಲ್ಲಿ ನಡೆದ ಅವರ ಪೀಠಾರೋಹಣದ ರಜತೋತ್ಸವ ಸಂದರ್ಭದಲ್ಲಿ (1967) ತಮ್ಮ 60ನೆಯ ವಯಸ್ಸಿಗೆ ನಿವೃತ್ತರಾಗುವುದಾಗಿಯೂ ಶಿಷ್ಯಮಂಡಳಿಯು ಯೋಗ್ಯ ವಟುವನ್ನು ಉತ್ತರಾಧಿಕಾರಿಯಾಗಿ ಆಯ್ಕೆಮಾಡಿಕೊಳ್ಳಬೇಕೆಂದೂ ಬಹಿರಂಗವಾಗಿ ಘೋಷಣೆ ಮಾಡಿದ್ದರು. ಆದರೆ ಶಿಷ್ಯರಾರೂ ಅದನ್ನು ಅಷ್ಟಾಗಿ ಕಿವಿಗೆ ಹಾಕಿಕೊಂಡಿರಲಿಲ್ಲ. ಏಳು ವರ್ಷಗಳ ನಂತರ ಅಂದರೆ 1974 ರಲ್ಲಿ 60 ವರ್ಷ ವಯಸ್ಸು ಮುಟ್ಟಿದಾಗ ನುಡಿದಂತೆ ನಡೆಯಬೇಕೆಂಬ ಬಸವಣ್ಣನವರ ಆದರ್ಶವನ್ನು ಶಿರದಲಾಂತು ಅವರು ಈ ಹಿಂದೆ ಘೋಷಣೆ ಮಾಡಿದಂತೆ ನಡೆದುಕೊಳ್ಳಲು ನಿರ್ಧರಿಸಿ ಪೀಠದಿಂದ ಸ್ವಯಂನಿವೃತ್ತಿ ಸೂಚಕವಾದ 'ತ್ಯಾಗಪತ್ರ'ವನ್ನು ಶಿಷ್ಯಮಂಡಳಿಗೆ ಲಿಖಿತವಾಗಿ ಸಲ್ಲಿಸಿದರು. ಪೀಠತ್ಯಾಗಕ್ಕೆ ಅವರು ಕೊಟ್ಟ ಕಾರಣ ಹೀಗಿದೆ:

"ಸಾಮಾನ್ಯವಾಗಿ ನಮ್ಮ ದೇಶದಲ್ಲಿ ಕೌಟುಂಬಿಕ, ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಜೀವನದಲ್ಲಿ ನಿವೃತ್ತಿ ಮನೋಭಾವವೇ ವಿರಳ, ಅಪರೂಪ. ನಮ್ಮ ಈ ನಿವೃತ್ತಿ ಪತ್ರದ ಈ ಸಂದರ್ಭವು ಅನೇಕ ಜನರಿಗೆ ವಿಸ್ಮಯಪ್ರಸಂಗವಾಗಿ ತೋರಬಹುದು. ಆದರೆ ಒಂದು ಅಧಿಕಾರ ಸ್ಥಾನದಲ್ಲಿ ಒಬ್ಬನೇ ವ್ಯಕ್ತಿಯು ಜೀವಾವಧಿ ಅಂಟಿಕೊಂಡು ಬರುವ ಪದ್ಧತಿಯು ಆ ಸಂಸ್ಥೆಯ ಬೆಳವಣಿಗೆ ಮತ್ತು ಭದ್ರತೆ ಈ ಮುಂತಾದ ದೃಷ್ಟಿಯಿಂದ ಉಚಿತವಾದುದಲ್ಲ.... ಒಬ್ಬನ ಕಾಲಾನಂತರ ಆ ಸ್ಥಾನಕ್ಕೆ ಮತ್ತೊಬ್ಬನನ್ನು ತರುವಲ್ಲಿ ವಿಷಮಯ ಹೋರಾಟವನ್ನೇ ಎದುರಿಸಬೇಕಾದ ಪ್ರಸಂಗಗಳುದ್ಭವಿಸುತ್ತಿರುವುದನ್ನೂ, ಈ ಫಲವಾಗಿ ಅನೇಕ ಸಂಘ ಸಂಸ್ಥೆಗಳು ಮಣ್ಣುಗೂಡುತ್ತಿರುವುದನ್ನೂ, ಅಧೋಗತಿಗೆ ಮತ್ತು ಅವ್ಯವಸ್ಥೆಗೆ ಈಡಾಗುತ್ತಿರುವುದನ್ನೂ ಪ್ರತ್ಯಕ್ಷವಾಗಿ ಕಾಣುತ್ತಲಿದ್ದೇವೆ. ಆದುದರಿಂದ ಜೀವನದ ಸುಭದ್ರತೆಗೆ ನಾವು ಅಪ್ಪಿ ಆದರಿಸಿಕೊಂಡು ಬಂದಿರುವ ಅನೇಕ ಕಟ್ಟುನಿಟ್ಟುಗಳು ಮತ್ತು ಪದ್ಧತಿಗಳೊಂದಿಗೆ ಒಂದು ನಿರ್ದಿಷ್ಟವಾದ ಅವಧಿಯಲ್ಲಿ ಆಡಳಿತದಿಂದ ನಿವೃತ್ತರಾಗಿ ಆಯಾಯ ಸಂಘ ಸಂಸ್ಥೆಗಳ ಅಥವಾ ಕುಟುಂಬಗಳ ಭವ್ಯ ಭವಿಷ್ಯದ ದೃಷ್ಟಿಯಿಂದ ಯೋಗ್ಯ ಉತ್ತರಾಧಿಕಾರಿಯನ್ನು ತರಪೇತುಗೊಳಿಸಿ ಅವನಿಗೆ ಅಧಿಕಾರವನ್ನು ವಹಿಸಿಕೊಡುವ ಪದ್ಧತಿಯನ್ನು ಜಾರಿಗೆ ತರುವುದು ಸಮಯೋಚಿತವಾಗಿದೆ."

ಗುರುವರ್ಯರ ತ್ಯಾಗಪತ್ರವನ್ನು ಓದಿದ ಶಿಷ್ಯರು ದಿಗ್ಭ್ರಾಂತರಾದರು. ಇಂದಿನಂತೆಯೇ ಅಂದೂ ಭಕ್ತಸಮೂಹ ಭಾವೋದ್ವೇಗಗಳಿಗೆ ಒಳಗಾಗಿ ಕಣ್ಣೀರಿಟ್ಟಿತು. ತಾವೇ ಪೀಠದಲ್ಲಿ ಮುಂದುವರಿಯಬೇಕೆಂದು ಒಕ್ಕೊರಲಿನಿಂದ ಬೇಡಿಕೊಂಡರೂ ನಮ್ಮ ಗುರುವರ್ಯರ ನಿರ್ಧಾರ ಮೇರುಪರ್ವತದಂತೆ ಅಚಲವಾಗಿತ್ತು. ಮಠದ ಪಟ್ಟಶಿಷ್ಯರೂ ಮತ್ತು ಆಗಿನ ಹೈಕೋರ್ಟ್ ನಿವೃತ್ತ ಅಡ್ವೊಕೇಟ್ ಜನರಲ್ ಆದ ಜಿ. ಚನ್ನಪ್ಪನವರ ಅಧ್ಯಕ್ಷತೆಯಲ್ಲಿ ಉತ್ತರಾಧಿಕಾರಿ ಆಯ್ಕೆ

- 2 -

ಸಮಿತಿ ನೇಮಕಗೊಂಡು ನಮ್ಮನ್ನು ಉತ್ತರಾಧಿಕಾರಿಯನ್ನಾಗಿ ಆಯ್ಕೆ ಮಾಡಲಾಯಿತು. ಆಗ ನಾವು ಕಾಶೀ ಮತ್ತು ಪರದೇಶದ ವಿಯೆನ್ನಾ ವಿಶ್ವವಿದ್ಯಾನಿಲಯದಲ್ಲಿ ಓದು ಮುಗಿಸಿಕೊಂಡು ಬರುವವರೆಗೂ ಗುರುವರ್ಯರೇ 5 ವರ್ಷಗಳ ಕಾಲ ಪೀಠದ ಉಸ್ತುವಾರಿಯನ್ನು ನೋಡಿಕೊಂಡು ನಮಗೆ ಪಟ್ಟಗಟ್ಟಿ ನಿವೃತ್ತರಾದರು.

ನಮ್ಮ ಗುರುವರ್ಯರ ತ್ಯಾಗಪತ್ರದ ಕೊನೆಯಲ್ಲಿರುವ ಈ ಮುಂದಿನ ಮಾತುಗಳು ಇಲ್ಲಿ ಮನನೀಯ: “ಮಠ ಪೀಠಗಳು ಸಾರ್ವಜನಿಕ ಸ್ವತ್ತುಗಳಾಗಿರುವಾಗ ಯಾವುದೇ ಸಾರ್ವಜನಿಕ ಸಂಸ್ಥೆಗಳಲ್ಲಾಗಲಿ ಅಧಿಪತಿಯು ಅದು ತನ್ನದೇ ವೈಯಕ್ತಿಕ ಆಸ್ತಿಯೆಂಬ ಮನೋಭಾವವು ಮೂಡಿ ಬರದಿರುವಂತೆ ನೋಡಿಕೊಳ್ಳುವುದು ಅನಿವಾರ್ಯವಾಗಿರಬೇಕು. ಈ ದೃಷ್ಟಿಯಿಂದಲೂ, ದೀರ್ಘಾವಧಿ ಒಬ್ಬ ವ್ಯಕ್ತಿಯು ಇಂತಹ ಸ್ಥಾನದಲ್ಲಿ ತನ್ನದೇ ಎಂಬ ಮೋಹದಿಂದ ಅಂಟಿಕೊಂಡು ಕುಳಿತುಕೊಳ್ಳುವುದಕ್ಕೆ ಅವಕಾಶವಾಗುವುದು ಆ ವ್ಯಕ್ತಿಯ ಗೌರವಕ್ಕೂ ಆ ಸಂಸ್ಥೆಯ ಭವಿಷ್ಯಕ್ಕೂ ಸಹಕಾರಿಯಾಗಲಾರದು. ಈ ಕಾರಣದಿಂದಲೇ ೬೦ ವರ್ಷಗಳ ಅವಧಿಯು ಅತ್ಯಂತ ದೀರ್ಘವಾದ ಅವಧಿಯು. ಇದನ್ನೇ ಒಂದು ಪರಿಮಿತಿಯನ್ನಾಗಿಟ್ಟುಕೊಂಡು ಮುಂದೂ ಸಹ ತಾನು ನಿವೃತ್ತನಾಗುವುದು ಅನಿವಾರ್ಯವಾಗಬೇಕು. ತಾನು ನಿವೃತ್ತನಾಗದಿದ್ದಲ್ಲಿ ಶಿಷ್ಯ ಮಂಡಳಿಯ ಅಭಿಪ್ರಾಯದಲ್ಲಿ ಅವನ ನಿವೃತ್ತಿಯು ಕಾರ್ಯಕಾರಿಯಾಗುವಂತಿರಬೇಕು. ಅಂದರೆ ಅಧಿಕಾರಸ್ಥಾನಕ್ಕೆ ತ್ಯಾಗಪತ್ರವನ್ನೀಯಲಿ ಅಥವಾ ಈಯದಿರಲಿ ಆತನು ನಿವೃತ್ತನಾದಂತೆಯೇ ಭಾವಿಸಲ್ಪಡಬೇಕು. ಅಂದರೆ ಮಾತ್ರ ಸಂಘ ಸಂಸ್ಥೆಗಳು ಪೂರ್ಣವಾಗಿ ಸಾರ್ವಜನಿಕ ಸ್ವತ್ತುಗಳೆಂದು ಪರಿಗಣಿಸುವಲ್ಲಿ ಸಾರ್ಥಕತೆಯು ಕಂಡು ಬರಬಲ್ಲುದು.”

ನಮ್ಮ ಪರಮಾರಾಧ್ಯ ಗುರುವರ್ಯರ ಆಶಯದಂತೆ ನಮ್ಮ 60 ನೇ ವಯಸ್ಸಿನಲ್ಲಿ ತ್ಯಾಗಪತ್ರವನ್ನು ಸಲ್ಲಿಸಿಲ್ಲ, ಅದಕ್ಕಾಗಿ ಅವರ ಪವಿತ್ರಾತ್ಮದಲ್ಲಿ ಕ್ಷಮೆಯನ್ನು ಯಾಚಿಸುತ್ತೇವೆ. ನಮಗೀಗ 65 ವರ್ಷ. ಅವರ ತ್ಯಾಗಪತ್ರವನ್ನೇ ಮಾನದಂಡವಾಗಿಟ್ಟುಕೊಂಡರೆ 5 ವರ್ಷಗಳ ಹೆಚ್ಚುವರಿ ಅವಧಿಯೂ ಮುಗಿದುಹೋಗಿದೆ. ಈ ಹಿನ್ನೆಲೆಯಲ್ಲಿ ನಾವು ಶಿಷ್ಯಮಂಡಳಿಯ ಮುಂದೆ ಮಂಡಿಸಿರುವುದು ಪೀಠತ್ಯಾಗದ ಘೋಷಣೆಯಲ್ಲ ಪೀಠನಿವೃತ್ತಿಯ ಅಪೇಕ್ಷೆ.

27.9.2012

ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑